# ರಕ್ಷಾಬಂಧನ ಬೌದ್ಧಿಕ ಬಿಂದುಗಳು

**02.08.2012**

# ಧರ್ಮೋ ರಕ್ಷತಿಃ ರಕ್ಷಿತಃ

## ರಾಷ್ಟ್ರ ರಕ್ಷಣೆಗೆ ಕಂಕಣ ಬದ್ಧರಾಗಿ:

ಧರ್ಮವನ್ನು ಉಳಿಸಿದರೆ ಧರ್ಮವು ಅವನನ್ನು ಉಳಿಸುತ್ತದೆ. ಧರ್ಮ ನಾಶವಾಗಲು ಬಿಡಬಾರದು. ಧರ್ಮವನ್ನೇ ಕೈಬಿಟ್ಟ ನಮ್ಮನ್ನು ಉಳಿಸುವವರಾರು ? ಅದು ನಮ್ಮ ನಾಶಕ್ಕೆ ಕಾರಣವಾಗುತ್ತದೆ. ಈ ಋಷಿ ವಾಕ್ಯ ನೂರಕ್ಕೆ ನೂರು ಸತ್ಯ. ಇಲ್ಲಿ ಧರ್ಮವೆಂದರೆ ಒಂದು ಸುವ್ಯವಸ್ಥೆ, ಒಳ್ಳೆಯ ಪದ್ಧತಿ, ಅನುಸರಿಸಬೇಕಾದ ಪರಂಪರೆ, ಪಾಲಿಸಬೇಕಾದ ಶಿಸ್ತು.

**ರಾಷ್ಟ್ರ ಧರ್ಮ** : ಕಾಶ್ಮೀರ ಕಣಿವೆಯಲ್ಲಿದ್ದ ಹಿಂದುಗಳು, ಸಂಘಟನೆಗೆ ಕವಡೆ ಬೆಲೆ ಕೊಡಲಿಲ್ಲ. ತಮ್ಮ ರಕ್ಷಣೆ ತಾವು ಮಾಡಿಕೊಳ್ಳುವಷ್ಟು ಸಿರಿ ಸಂಪತ್ತು ಇದೆ. ತಮಗೆ ತೊಂದರೆ ಕೊಡುವವರಾರು? ಎಂದು ದಂತ ಗೋಪುರದಲ್ಲಿ ವಾಸಿಸುತ್ತಿದ್ದರು. ತಮ್ಮ ಸುಖಭೋಗಗಳಲ್ಲಿ ಮೈಮರೆತು, ರಾಷ್ಟ್ರ ರಕ್ಷಣೆ ಹಿಂದು ಸಂಘಟನೆ ವಿಷಯ ಬಂದಾಗ ಅದು ಸಂಕುಚಿತ ಎಂದು ಮೂಗು ಮುರಿಯುತ್ತಿದ್ದರು. ಸೆಕ್ಯುಲರಿಸಂ ಅನ್ನು ಬೋಧಿಸುತ್ತಿದ್ದರು. ರತ್ನಗಂಬಳಿ ಮೇಳೆ ಮಲಗುತ್ತಿದ್ದವರು ಇಂದು ದೆಹಲಿಯ ಫುಟ್‌ಪಾತಿಗೆ ಬರುವ ಪಾಡು ಅವತ್ತು ಎಚ್ಚರವಾಗಿದ್ದಿದ್ದರೆ ಬರುತ್ತಿತ್ತೇ?

**ಪುತ್ರ ಧರ್ಮ** : ವಯಸ್ಸಾದ ತಂದೆ ತಾಯಿಯರು ತಮ್ಮ ಏಕಾಂತ ಜೀವನಕ್ಕೆ ಅಡ್ಡಿ ಎಂದು ಸ್ವಂತ ಮನೆಯಿಂದ ಹೊರಹೋಗಿ ಬೇರೆ ಮನೆ ಮಾಡಿಕೊಂಡ ಯುವ ದಂಪತಿಗಳು ಕುಟುಂಬ ಧರ್ಮವನ್ನು ಪಾಲಿಸಲಿಲ್ಲ. ಮುಂದೊಂದು ದಿನ ಅವರಿಗೂ ವಯಸ್ಸಾಯಿತು. ಅವರನ್ನು ಮಗ ವೃದ್ಧಾಶ್ರಮಕ್ಕೆ ಕಳುಹಿಸಿದ. ಯೌವನದ ಮದದಲ್ಲಿ ಅರ್ಥವಾಗದ ಧರ್ಮದ ಮರ್ಮ ಇಳಿ ವಯಸ್ಸಿನಲ್ಲಿ ತಿಳಿಯಿತು.

**ಮಾತಾ-ಪಿತೃ ಧರ್ಮ** : ಯುವ ಮನಸ್ಸುಗಳನ್ನು ಅರಿಯಲು ಪ್ರಯತ್ನಿಸದೇ ತಮ್ಮ ದೌರ್ಬಲ್ಯ, ಅಸೂಯೆ, ಸೆಳೆತಗಳನ್ನು ಕಿರಿಯರ ಮೇಲೆ ಹೇರುತ್ತಾ, ಅಸಹನೀಯ ವಾತಾವರಣ ಸೃಷ್ಟಿಗೆ ಕಾರಣರಾದ ವೃದ್ಧ ತಂದೆ-ತಾಯಿಗಳು ಮಕ್ಕಳು ಮೊಮ್ಮಕ್ಕಳುಗಳಿಂದ ದೂರವಾಗಿ ಕೊನೆಯ ದಿನಗಳನ್ನು ಅಸಹನೀಯವಾಗಿ ಕಳೆಯಬೇಕಾಗುತ್ತದೆ.

**ದೇಹ ಧರ್ಮ** : ಯುವಕನಾಗಿದ್ದಾಗ ಒಂದು ದಿನಕ್ಕೆ ಮಾಡುವ 13 ಸೂರ್ಯನಮಸ್ಕಾರಗಳು ಮುಪ್ಪಿನ ಕಾಲದಲ್ಲಿ ಒಂದು ತಿಂಗಳ ಆರೋಗ್ಯ ನೀಡುತ್ತವೆ ಎಂದು ಕೊನೆಯವರೆಗೆ ಚಟುವಟಿಕೆಯಿಂದ ಬದುಕಿದ್ದವರು ತಮ್ಮ ಮಾತಿಗೆ ಜೀವಂತ ಉದಾಹರಣೆ ಆಗಿದ್ದವರು ನರಿಕೊಂಬುವಿನ ಸೋಮಯಾಜಿಗಳು.

**ಆರೋಗ್ಯ ಧರ್ಮ** : ಸೂರ್ಯ ಉದಯಕ್ಕೆ ಮೊದಲೇ ಏಳುವುದು, ನಿತ್ಯ ವ್ಯಾಯಾಮ, ನಿಯಮಿತ ಆಹಾರ-ನಿದ್ದೆ, ಒಳ್ಳೆಯ ಯೋಚನೆ, ಉತ್ತಮರ ಸಹವಾಸ ಇವು ಇಂದು ಬಹಳ ದುಬಾರಿ ಎನಿಸಿರುವ ವೈಯಕ್ತಿಕ ಆರೋಗ್ಯಕ್ಕೆ ನೀಡಬೇಕಾದ ಬೆಲೆ.

**ಸಂಯಮ ಧರ್ಮ** : ಹೇಗೆಂದರೆ ಹಾಗೆ, ಎಷ್ಟೆಂದರೆ ಅಷ್ಟು ವಿಪರೀತವಾಗಿ ತಿನ್ನುವ ಸ್ವಭಾವದ, ಒಟ್ಟಾರೆ ಇಂದ್ರಿಯ ನಿಗ್ರಹ ಇಲ್ಲದೆ ಅಥವಾ ವ್ಯಸನಗಳಿಗೆ ಬಲಿಯಾದ ವ್ಯಕ್ತಿಯು ಪತನವಾಗಲು ವರ್ಷಗಳು ಬೇಡ. ಪಾಲಿಸಿದ ಆರೋಗ್ಯ ಧರ್ಮವು ಅವನನ್ನು ಆರೋಗ್ಯ ಕೆಟ್ಟಾಗ ಸಂರಕ್ಷಿಸುತ್ತದೆ.

**ಪ್ರಕೃತಿ ಧರ್ಮ** : ಮಳೆ ವಿಪರೀತ ಎಂಬ ಲೆಕ್ಕಾಚಾರದಲ್ಲಿ ಕಾಡು ಮಳೆಗೆ ಕಾರಣವಾಗಿದ್ದ ದಟ್ಟ ಕಾಡನ್ನು ಕತ್ತರಿಸಿ, ಆಣೆಕಟ್ಟು ಕಟ್ಟಿ, ಈಗ ಮಳೆ ಬರುತ್ತಿಲ್ಲ ಎಂಬ ಕೊರಗು ಗೊರೂರಿನಂತಹ ಅನೇಕ ಜಲಾಶಯಗಳ ಪ್ರದೇಶದಲ್ಲಿ ಕಾಡುತ್ತಿದೆ. ನೇತ್ರಾವತಿ ತಿರುವು ಯೋಜನೆಯ ಹಿಂದೆಯೂ ಇಂತಹುದೇ ವಿನಾಶದ ಸಾಹಸ ಕೆಲಸ ಮಾಡುತ್ತಿದೆ. ನೇತ್ರಾವತಿ ತಿರುವು ಯೋಜನೆಗೆ ಪ್ರಯತ್ನ ಮಾಡಿದರೆ, ಅಲ್ಲಿಯೂ ನೀರು ಇರದು, ಇನ್ನು ತಿರುವಿಗೂ ನೀರು ಬರದು.

**ನೆರೆಹೊರೆ ದೇಶ ರಕ್ಷಣೆ** : ಟಿಬೇಟಿನ ಮೇಲೆ ಆಕ್ರಮಣ ಮಾಡಿದ ಚೀನಾವನ್ನು ಅಂದಿನ ಪ್ರಧಾನಿ ನೆಹರೂ ತಡೆಯಲಿಲ್ಲ. ಆದರೆ ಇಂದು ಚೀನಾ ಕೈಯಲ್ಲಿ ಅತಿ ಎತ್ತರದ ಸೈನಿಕ ನೆಲೆಯಲ್ಲಿ ನಿರ್ಣಾಯಕ ಆಯಕಟ್ಟಿನ ಸ್ಥಳ ಟಿಬೆಟ್ ಆಗಿದೆ.

**ಪ್ರಜಾಪ್ರಭುತ್ವ ಧರ್ಮ** : 1975ರಲ್ಲಿ ಪ್ರಧಾನಿ ಇಂದಿರಾ ದೇಶದ ಮೇಲೆ ತುರ್ತುಪರಿಸ್ಥಿತಿಯ ಕರಾಳ ಶಾಸನವನ್ನು ಕಿತ್ತೆಸೆಯಲು ಸಂಘದ ಸ್ವಯಂಸೇವಕರು ದೊಡ್ಡ ಭೂಗತ ಚಳುವಳಿ ಕಟ್ಟಿದ ಕಾರಣದಿಂದ  ಇಂದು ಪ್ರಜಾಪ್ರಭುತ್ವ ಜೀವಂತವಾಗಿದೆ. ನಮ್ಮ ನಮ್ಮ ಇಚ್ಛೆಯಂತೆ ನಮಗೆ ಬದುಕಲು ಬಿಟ್ಟಿದೆ. ನಮ್ಮ ವಾಕ್ ಸ್ವಾತಂತ್ರ್ಯ, ಅಭಿವ್ಯಕ್ತಿ ಸ್ವಾತಂತ್ರ್ಯ, ಪತ್ರಿಕಾ ಸ್ವಾತಂತ್ರ್ಯಗಳು ನಮಗೆ ಸಿಕ್ಕಿವೆ.

**ವೃಕ್ಷ ಧರ್ಮ** : ಮಕ್ಕಳಿಲ್ಲವೆಂದು ಕೊರಗುತ್ತಾ ಕೂರುವ ಬದಲಿಗೆ ನೂರಾರು ಮರಗಳನ್ನೇ ಮಕ್ಕಳೆಂದು ಕಷ್ಟಪಟ್ಟು ನೀರು ಹೊತ್ತು ಸಲುಹಿದ ಸಾಲು ಮರದ ತಿಮ್ಮಕ್ಕನಿಗೆ ಇಂದು ಅದೇ ಮರಗಳು ಅದೇ ಕಷ್ಟಪಟ್ಟ ದಿನಗಳು ವರದಾನವಾಗಿವೆ.

**ಜಲ ಧರ್ಮ** : ಹನಿ ಹನಿ ನೀರು ಉಳಿಸುವ ಪ್ರಯತ್ನದಿಂದ ರಾಜಸ್ಥಾನದ ಬೆಂಗಾಡು ಪ್ರದೇಶ ಹಸಿರಾಗಿದ್ದು ರಾಜೇಂದ್ರಸಿಂಗ್ ಅವರ ಚಮಾತ್ಕಾರ. ಇಂದು ಹಸಿರೂ ಇದೆ, ಮಳೆಯೂ ಬರುತ್ತಿದೆ. ನೀರೂ ಉಳಿಯುತ್ತಿದೆ.

**ಟ್ರಾಫಿಕ್ ಧರ್ಮ** : ಇದು ಒಂದು ಅನಿವಾರ್ಯವಾದ ಆಧುನಿಕ ಧರ್ಮ. ಅಪಘಾತಗಳು ಆಗುವ ಮೊದಲು ಅಥವಾ ಆದ ನಂತರ ಚಾಲಕನ ರಕ್ಷಣೆಗೆ ಬರುತ್ತದೆ ಟ್ರಾಫಿಕ್ ಧರ್ಮ. ನಿಯಮ ಪಾಲಿಸಿದವನು ಸುರಕ್ಷಿತನಾಗುವ ಸಾಧ್ಯತೆ ಹೆಚ್ಚು.

**ವಿತ್ತ ಧರ್ಮ** : "ರಾತ್ರಿ ದಿಂಬಿಗೆ ತಲೆ ಕೊಟ್ಟು ಮಲಗುವಾಗ ಬರುವ ಶಾಂತ ನಿದ್ದೆ ನಿನ್ನ ಪ್ರಾಮಾಣಿಕತೆಯ ಅಳತೆಗೋಲು" ಎಂದು ನುಡಿದ, ಅದರಂತೆ ನಡೆದ, ಇನ್‌ಫೋಸಿಸ್ ನಾರಾಯಣ ಮೂರ್ತಿ ಅವರಿಗೆ ಇಂದು ತಮ್ಮ 5,000 ಕೋಟಿಗೂ ಮೀರಿದ ಆಸ್ತಿ ಭಾರವೂ ಅಲ್ಲ, ಚಿಂತೆಯೂ ಇಲ್ಲ, ಅಲ್ಲಿ ಅಹಂಕಾರವೂ ಸುಳಿದಿಲ್ಲ.

**ಅರ್ಥ ಧರ್ಮ** : ಸತ್ಯಂ ಹೆಸರಿನಲ್ಲಿ ಅಕ್ರಮವಾಗಿ ಗಳಿಸಿದ ಹಣ ರಾಜು ಸೋದರರಿಗಾಗಲಿ, ಭೂಮಿಯನ್ನು ಸುಲಿದು ದುಡ್ಡು ಮಾಡಿದ ರೆಡ್ಡಿ ಸಹೋದರರಿಗಾಗಲಿ, ಹಣವು ಸುಖ–ಸಂತೋಷ–ತೃಪ್ತಿ–ಮರ್ಯಾದೆ ನೀಡಿತೇ? ಅಕ್ರಮ ಸಂಪಾದನೆಯ ಕ್ಷಣಿಕ ಸುಖ ಎಲ್ಲಿ ಹೋಯಿತು? ಮೋಸದ ಹಣವೇ ಅವರಿಗೆ ಮುಳ್ಳಾಯಿತು.
**ಶಾಂತಿ ಧರ್ಮ** : ಇನ್ನೊಬ್ಬರ ಶಾಂತಿ ಕದಡಿ, ಭಯೋತ್ಪಾದನೆಗೆ ಪ್ರೋತ್ಸಾಹ ಕೊಟ್ಟದ್ದರಿಂದ ಇಂದು ಅನೇಕ ಇಸ್ಲಾಮಿಕ್ ದೇಶಗಳು ಹಿಂಸೆ ಕ್ರೌರ್ಯಗಳ ತವರುಭೂಮಿಗಳಾಗಿವೆ. ಅವರಿಗೆ ಬೇರೆ ಶತ್ರುಗಳು ಬೇಡ. ಶತ್ರುವಿಗಿಂತ ದೊಡ್ಡ ಶತ್ರುಗಳು ತಮ್ಮಲ್ಲೇ ಹುಟ್ಟಿಕೊಂಡಿದ್ದಾರೆ.
**ಭೂಮಿ ಧರ್ಮ** : ಅಧಿಕ ಬೆಳೆ ಬೆಳೆಯಲಿ ಎಂಬ ದುರಾಸೆಯಿಂದ ಭೂಮಿಗೆ ಸುರಿದ ಲಕ್ಷ ಲಕ್ಷ ಟನ್ ರಾಸಾಯನಿಕ ಗೊಬ್ಬರ ಕ್ರಿಮಿನಾಶಕಗಳು ಇವತ್ತು ರೈತನ ಸಂತತಿಯನ್ನೇ ತಿನ್ನುತ್ತಿವೆ, ಬಹು ವಿಧ ರೋಗಗಳಿಗೆ ಕಾರಣವಾಗಿವೆ. ಅತಿ ಹೆಚ್ಚು ಆಸ್ಪತ್ರೆ ಔಷಧಿ ಅಂಗಡಿ ಇರುವ ಮಂಡ್ಯ, ರಾಯಚೂರು, ಕೊಪ್ಪಳ ಜಿಲ್ಲೆಗಳ ಸಾಲಿಗೆ ಇನ್ನಷ್ಟು ಜಿಲ್ಲೆಗಳು ಸೇರಲಿವೆ.
**ರಾಮ ಧರ್ಮ** : ಬಿಜೆಪಿ ಅಂದು ರಥಯಾತ್ರೆಯ ಮೂಲಕ ತಂದ ರಾಮಮಂದಿರ ವಿಷಯ ಅವರನ್ನು ಅಧಿಕಾರಕ್ಕೆ ತಂದಿತು. ಅಧಿಕಾರದ ಹೊಯ್ದಾಟದಲ್ಲಿ ರಾಮನನ್ನು ಕೈಬಿಟ್ಟರು, ರಾಮ ಇವರನ್ನು ಕೈಬಿಟ್ಟ. ಒಂದು ಕಾಲಕ್ಕೆ ಉತ್ತರ ಪ್ರದೇಶ ರಾಜ್ಯವಾಳಿದ್ದ ಬಿಜೆಪಿ ಇಂದು ಅಲ್ಲಿ ನಾಲ್ಕನೆಯ ಸ್ಥಾನ ಪಡೆಯುವ ಪಕ್ಷ.
**ರಾಮಲಲ್ಲಾ ಧರ್ಮ** : 1992 ಡಿಸೆಂಬರ್ 6 ರಂದು ಗುಮ್ಮಟ ಉರುಳಿತು, ರಾಮಲಲ್ಲಾನಿಗೆ ನೆರಳು ಆಸರೆ ಇರಲಿಲ್ಲ. ಅಂದು ಅವಸರವಸರದಲ್ಲಿ ನಿರ್ಮಿಸಿದ ಪುಟ್ಟ ತಾತ್ಕಾಲಿಕ ಮಂದಿರವು ಇಂದು ಹಿಂದುಗಳ ಭವ್ಯ ರಾಮಮಂದಿರ ಬೇಡಿಕೆ ಹಕ್ಕನ್ನು ಜೀವಂತವಾಗಿಟ್ಟಿದೆ.
**ಕಾರ್ಯಕರ್ತ ಧರ್ಮ** : ಕಾರ್ಯಕರ್ತ ಆಧಾರಿತ ಪಕ್ಷವಾಗಿದ್ದ ಬಿಜೆಪಿಯ ಕೆಲವು ನಾಯಕರು ಕಾರ್ಯಕರ್ತರನ್ನು ನಂಬಿ ಕೂರಲಿಲ್ಲ. ಬದಲಾಗಿ ಹಣವೇ ಪರಮ ಎಂದು 'ಬಗೆ'ದರು. ಅದೇ ಹಣ ಇಂದು ಅವರನ್ನು ನುಂಗುತ್ತಿದೆ. ಹಣವೂ ಇಲ್ಲ, ಬೆಲೆಯೂ ಇಲ್ಲ, ಹಣ ಸಂಸ್ಕೃತಿಯಿಂದಾಗಿ ನಿಷ್ಠಾವಂತ ಕಾರ್ಯಕರ್ತರು ಅವರ ಪಾಲಿಗೆ ಇಲ್ಲ ಎನ್ನುವ ಗತಿ ಬಂದಿದೆ.

**ಹೀಗೆ ಯಾವುದೇ ಧರ್ಮ (ಕರ್ತವ್ಯಗಳನ್ನು) ನಾವು ಉಳಿಸಿ ಬೆಳೆಸಿದರೆ ಅದು ನಮ್ಮನ್ನು ಕೈಬಿಡದು. ಕಷ್ಟ ಕಾಲದಲ್ಲಿ ನೆರವಿಗೆ ಬಂದೇ ಬರುತ್ತದೆ. ಅಧರ್ಮದಲ್ಲಿ ನಡೆದರೆ ಅದು ನಾಶಕ್ಕೆ ಕಾರಣವಾಗುತ್ತದೆ.**

ಈ ಬಾರಿ ಮುಂಗಾರು ಕೈಕೊಟ್ಟಿದೆ. ಕೆರೆ ಬಾವಿ ನೀರು ಕೆಳಗಿಳಿಯುತ್ತಿದೆ. ಜಲಾಶಯಗಳು ಬರಿದಾಗಿವೆ. ತೋಟ ಹೊಲ ಗದ್ದೆಗಳು ಒಣಗಿ ನಿಂತಿವೆ. ಆದರೂ ಮಳೆ ಬರುವ ವಾತಾವರಣ ಇದೆ. ಪ್ರಕೃತಿ ಪೆಟ್ಟು ಕೊಟ್ಟಾಳು, ಕೈ ಬಿಡುವುದಿಲ್ಲ ಎಂಬ ವಿಶ್ವಾಸದ ಮೇಲೆ ಬಾಳು ಸಾಗುತ್ತಿದೆ. ನೀರಿನ ಒಂದೊಂದು ಹನಿಯ ಬೆಲೆ ಏನು ಎಂಬುದು ಇನ್ನೂ ನಮಗೆ ಅರ್ಥವಾಗಿಲ್ಲ. ನೀರು ಇಲ್ಲವಾದಾಗ ಮಾತ್ರ ಅದರ ಮಹತ್ವ ತಿಳಿದೀತು. ಆ ಪರಿಸ್ಥಿತಿ ಬರುತ್ತಿದೆ. ಪರಿಸ್ಥಿತಿ ಕೈಮೀರುವ ಮುನ್ನ ಎಚ್ಚರಗೊಳ್ಳಲೇಬೇಕಾಗಿದೆ.

ಜಾಗತಿಕ ಕ್ರೀಡೋತ್ಸವ ಓಲಂಪಿಕ್ಸ್ ಸಮೀಪಿಸಿದೆ, ಪದಕ ಗೆಲ್ಲುವ ಆಸೆಗಳು ಹಿಂದೆಂದಿಗಿಂತ ಹೆಚ್ಚಾಗಿವೆ. ಬೆಲೆಗಳು ಗಗನಕ್ಕೆ ಏರುತ್ತಿವೆ, ರೂಪಾಯಿ ಕುಸಿಯುತ್ತಿದೆ. ಜೀವನ ದುಬಾರಿಯಾಗುತ್ತಿದೆ, ನಂಬಿಕೆ ವಿಶ್ವಾಸ ಮೌಲ್ಯಗಳು ಹಗುರವಾಗುತ್ತಿವೆ. ಬಯಕೆಗಳು ಹೆಚ್ಚಾಗಿವೆ, ಉದಾರತೆ ಕಡಿಮೆಯಾಗುತ್ತಿದೆ. ಮಾನವೀಯ ಸಂಬಂಧಗಳ ಜಾಗದಲ್ಲಿ ವ್ಯಾವಹಾರಿಕತೆ ಬಂದು ಕುಳಿತಿದೆ.

ಪಾಕ್ ಆಕ್ರಮಿತ ಕಾಶ್ಮೀರವನ್ನು ಮರಳಿ ಪಡೆಯುವ ಬದಲು, ಜಮ್ಮು ಮತ್ತು ಕಾಶ್ಮೀರವನ್ನು ಪಾಕಿಸ್ತಾನಕ್ಕೆ ಒಪ್ಪಿಸುವ ರೀತಿಯ ಸ್ವಾಯತ್ತತೆ ನೀಡುವ ಹಂತಕ್ಕೆ ಕೇಂದ್ರದ ಯುಪಿಎ ಸರಕಾರ ಚಿಂತನೆ ನಡೆಸಿದೆ. ಅತ್ತ ಚೀನಾ ಭಾರತದ ವಿರುದ್ಧ ಹೊಂಚು ಹಾಕುವ ಪೂರ್ಣ ತಯಾರಿ ಮಾಡಿದೆ. ಪಾಕ್‌ನ ಜೊತೆ ಸೇರಿ ಅನೇಕ ರೀತಿಯ ಕ್ಯಾತೆ ತೆಗೆಯುತ್ತಿದೆ. ನಮ್ಮ ದೇಶದ ಪ್ರಧಾನಿ ಇದ್ಯಾವುದೇ ಪರಿಸ್ಥಿತಿಗೆ ಸ್ಪಂದಿಸದ ಅತ್ಯಂತ ದುರ್ಬಲ ವ್ಯಕ್ತಿಯಾಗಿದ್ದಾರೆ. ವಿದೇಶೀ ಮೂಲದ ಮಹಿಳೆಯ ಗುಲಾಮ ಎಂದು ವಿದೇಶದ ಮಾಧ್ಯಮಗಳು ಬಿಂಬಿಸುವಷ್ಟು ತನ್ನತನ ಕಳೆದುಕೊಂಡಿದ್ದಾರೆ. ಇದು ದೇಶದ ದುರಂತ. ಇನ್ನು ಈ ದೇಶದ ಜನಸಾಮಾನ್ಯ ವ್ಯಕ್ತಿಯು ತನ್ನ ಸಮಸ್ಯೆಗಳನ್ನು ದೊಡ್ಡದು ಮಾಡಿಕೊಂಡು ದೇಶ ಸಮಾಜಗಳ ದೃಷ್ಟಿಯಿಂದ ಮೈಮರೆತಿದ್ದಾನೆ.

ಭಾರತ ಹಿಂದುಳಿದ ರಾಷ್ಟ್ರ ಎನಿಸಿಕೊಳ್ಳಲು ಕಾರಣ ಇನ್ನಾರು? ನಾವೇ ಭಾರತೀಯರು. ಸರಿಯಾಗಿ ಮೈ ಮುರಿದು ದುಡಿಯದೇ, ಇರುವ ವ್ಯವಸ್ಥೆ–ಸಂಪನ್ಮೂಲಗಳನ್ನು ದುಡಿಸಿಕೊಳ್ಳದೇ ಸೋಮಾರಿಗಳಾಗಿ, ಆಲಸ್ಯ–ಅಶಿಸ್ತು–ಅವ್ಯವಸ್ಥೆಗಳನ್ನು ಅಪ್ಪಿಕೊಂಡು ಮಲಗಿರುವ ನಾವು ವಿಶ್ವಶಕ್ತಿಯಾಗಬೇಕು ಎನ್ನುವುದು ಭಿಕ್ಷುಕನ ಕನಸಿನಂತೆ. ನಮ್ಮಲ್ಲಿ ಅಡಗಿರುವ ಶಕ್ತಿಯನ್ನು ಸರಿಯಾಗಿ ಗುರುತಿಸಿಕೊಳ್ಳದೇ ಸರಕಾರ ಅಸಹಕಾರ ಇತ್ಯಾದಿಗಳನ್ನು ದೂರಿಕೊಂಡೇ ಕಾಲ ಕಳೆಯುವವರಿಗೆ ದೇವರು ಸಹ ಏನೂ ಸಹಾಯ ಮಾಡಲಾರ.

'ಆದಂತಾಗಲಿ' ಎಂಬುದು ನಮ್ಮ ಧೋರಣೆಯಾದರೆ 2020 ಅಲ್ಲ, 2050 ಬಂದರೂ ನಾವು ವಿಶ್ವಶಕ್ತಿಯಾಗಲು ಸಾಧ್ಯವಿಲ್ಲ. ನಾವೀಗ ಹೀಗೆಯೇ ಇದ್ದ ಹಾಗೆ ದರಿದ್ರರಾಗಿಯೇ ಇರುತ್ತೇವೆ. ಅಥವಾ ಇನ್ನಷ್ಟು ಅಧೋಗತಿಗೆ ಹೋದರೂ ಅಚ್ಚರಿಯಿಲ್ಲ. ಹಾಗಾದರೆ ವಿಶ್ವದ ಬಲಾಢ್ಯ ಶಕ್ತಿಯಾಗಲು ನಾವು ಏನು ಮಾಡುವುದು? ನಮ್ಮಲ್ಲಿನ ಪ್ರತಿಯೊಬ್ಬನೂ ತಾನು ನಿರ್ವಹಿಸಬೇಕಾದ ಪಾತ್ರ ಮತ್ತು ಕರ್ತವ್ಯಗಳನ್ನು ಸರಿಯಾಗಿ ಅರ್ಥೈಸಿಕೊಂಡು ಕೆಲಸ ಮಾಡಿದರೆ ಮಾತ್ರ 'ವಿಶ್ವಶಕ್ತಿ'ಯ ಪಟ್ಟ.

ಭಾರತದ ಪರಮ ವೈಭವ ಸ್ಥಿತಿ – ಇದು ಅಸಾಧ್ಯವೂ ಅಲ್ಲ, ಸುಲಭವೂ ಅಲ್ಲ. ಹಾಗೆಯೇ ದೇಶದ ಅತ್ಯುನ್ನತ ಸ್ಥಿತಿ ಪುಕ್ಕಟ್ಟೆ ಸಿಗುವುದಿಲ್ಲ. ಅದಕ್ಕೆ ತಕ್ಕ ಬೆಲೆ ತೆರಲೇಬೇಕು. ನಾಡಿನ ಪ್ರತಿಯೊಬ್ಬ ವ್ಯಕ್ತಿ ಸೊಂಟಕಟ್ಟಿ ನಿಲ್ಲಬೇಕು. ಎಷ್ಟು ಶೀಘ್ರವಾಗಿ, ಹೆಚ್ಚಿನ ಸಂಖ್ಯೆಯಲ್ಲಿ ವ್ಯಕ್ತಿಗಳು ಈ ನಿಶ್ಚಯ ಮಾಡಿ, ಅದಕ್ಕೆ ತಕ್ಕಂತೆ ಪ್ರಯತ್ನ ಮಾಡುತ್ತಾರೋ, ಅಷ್ಟು ಬೇಗ ಇದು ಸಾಧ್ಯವಾಗುತ್ತದೆ. ಭಾರತ ಜಾಗತಿಕ ಶಕ್ತಿಯಾಗಲು ಯಾವ ರೀತಿಯ ಬೆಲೆ ಕಟ್ಟಬೇಕು? ಪ್ರತಿಯೊಬ್ಬ ವ್ಯಕ್ತಿಯು ತನ್ನ ಹೆಚ್ಚು ಹೆಚ್ಚು ಸಮಯ,

ತನ್ನಲ್ಲಿರುವ ಪ್ರತಿಭೆ, ಪರಿಶ್ರಮ, ತಿಳುವಳಿಕೆ ಮುಂತಾದ ಎಲ್ಲಾ ಸಾಮರ್ಥ್ಯವನ್ನು ದೇಶ ಕಾರ್ಯಕ್ಕೆ ನೀಡುವುದೇ ಅದಕ್ಕೆ ಕೊಡಬೇಕಾದ ಬೆಲೆ.

ಭಾರತವನ್ನು ಪರಮವೈಭವ ಸ್ಥಿತಿಗೆ ಎತ್ತರಿಸಲು ತನ್ನನ್ನು ತಾನು ಎತ್ತರಿಸಿಕೊಳ್ಳುವ, ಉಳಿದವರನ್ನು ಎತ್ತರಕ್ಕೆ ಕರೆದೊಯ್ಯುವ ಮಾನವ ಶಿಲ್ಪಿಗಳು ಇಂದು ತೀರಾ ಅಗತ್ಯವಾಗಿದ್ದಾರೆ. ಅಂತಹ ಮಾನವಶಿಲ್ಪಿಗಳಲ್ಲಿ ನಾನೂ ಒಬ್ಬನಾಗಬಹುದೇ? ಅದಕ್ಕಾಗಿ ಪ್ರತಿ ಕ್ಷಣದ ತಯಾರಿ ಮಾಡಿಕೊಳ್ಳಬೇಕು. ಪ್ರತಿ ಬೀದಿ, ಹಳ್ಳಿ, ಪಟ್ಟಣ, ನಗರಗಳಲ್ಲಿ ಬದಲಾವಣೆಗಾಗಿ ಪರಿತಪಿಸುವ ಕಾರ್ಯಕರ್ತರು ಬೇಕು. ನಮ್ಮಲ್ಲಿ ಪ್ರತಿಯೊಬ್ಬರೂ ರಾಷ್ಟ್ರನಿರ್ಮಾಣದ ಈ ಮಹಾನ್ ಕಾರ್ಯಕ್ಕೆ ನಿತ್ಯ–ಪ್ರತಿನಿತ್ಯ ಹೆಚ್ಚು ಹೆಚ್ಚು ಸಮಯ ಕೊಡುವಂತೆ ಆಗಬೇಕು. ಉದ್ಯೋಗ ಮತ್ತು ಮನೆ ನಿರ್ವಹಣೆಗೆ ಅನಿವಾರ್ಯವಾದ ಸಮಯ ಕೊಟ್ಟು ಉಳಿದೆಲ್ಲಾ ಸಮಯವನ್ನು ಸಮಾಜಕಾರ್ಯಕ್ಕೆ ಮೀಸಲಿಡಬೇಕು. ಪ್ರತಿದಿನ ರಾತ್ರಿ ಮಲಗುವ ಮುನ್ನ ಇಂದು ತಾನು ಎಷ್ಟು ಸಮಯವನ್ನು ಸಂಘಕಾರ್ಯಕ್ಕೆ ನೀಡಿದೆ ಎಂಬುದನ್ನು ಲೆಕ್ಕ ಹಾಕಿ ಆ ದಿನವನ್ನು ಸಾರ್ಥಕಪಡಿಸಿಕೊಳ್ಳುವದನ್ನು ರೂಢಿಸಿಕೊಳ್ಳಬೇಕು. ಇನ್ನು ಕೆಲವೇ ಕಾಲದಲ್ಲಿ ನನ್ನ ಊರಿನಲ್ಲಿ ಸಂಘಕಾರ್ಯವನ್ನು ಬೆಳೆಸುತ್ತಾ, ಆ ಮೂಲಕ ನನ್ನ ತಾಲೂಕು, ನನ್ನ ಜಿಲ್ಲೆ ಮತ್ತು ನಮ್ಮೆಲ್ಲರ ತುಮಕೂರು ವಿಭಾಗದಲ್ಲಿ ಅತ್ಯಂತ ದೃಢವಾದ ಸಂಘಕಾರ್ಯದ ನಿರ್ಮಾಪಕರು ನಾವಾಗಬಹುದೇ?

ವ್ಯಕ್ತಿ ನಿರ್ಮಾಣದ ಕಾರ್ಯ ಈ ಜಗತ್ತಿನಲ್ಲಿ ಅತ್ಯಂತ ಕಠಿಣ ಕೆಲಸ. ದುಡ್ಡಿದ್ದರೆ ಈ ಜಗತ್ತಿನಲ್ಲಿ ಏನು ಬೇಕಾದರೂ ಮಾಡಬಹುದು. ಕೆಲವು ತಿಂಗಳಲ್ಲಿ ರಸ್ತೆಯನ್ನು, ಪಟ್ಟಣವನ್ನು ಗುರುತು ಸಿಗದಂತೆ ಬದಲಾಯಿಸಬಹುದು. ಅದ್ಭುತ ಎನಿಸುವ ಮನೆ ಕಟ್ಟಬಹುದು. ಇದು ತನ್ನ ಮನೆಯೇ ಎಂದು ಸಂಶಯ ಪಡುವ ರೀತಿಯಲ್ಲಿ ಮನೆಯ ಒಳಾಂಗಣ ಅಲಂಕಾರ ಮಾಡಬಹುದು. ದುಡ್ಡು ಕೊಟ್ಟರೆ ಮನುಷ್ಯನ ಮುಖಚರ್ಯೆ, ಬಣ್ಣ ಎಲ್ಲವುಗಳನ್ನು ಬದಲಾಯಿಸಬಹುದು. ಆದರೆ ಮನುಷ್ಯನ ಗುಣ–ಮಾನಸಿಕತೆಯನ್ನು ದುಡ್ಡಿನಿಂದ ಬದಲಾಯಿಸಲು ಸಾಧ್ಯವಿದೆಯೇ? ಮನುಷ್ಯನ ಗುಣಗಳನ್ನು ಬದಲಿಸುವ ವರ್ಕ್‌ಶಾಪ್ ಆಗಲಿ, ಕೋಚಿಂಗ್ ಸೆಂಟರ್ ಆಗಲಿ, ವ್ಯಕ್ತಿವಿಕಾಸ ತರಗತಿಗಳಾಗಲಿ ಇವೆಯೇ?

ಆದರೆ ಇಂತಹ ಕಠಿಣ ಕೆಲಸವನ್ನು ನೀರು ಕುಡಿದಷ್ಟು ಸುಲಭ ಸರಳವಾಗಿ ಮಾಡಲು ಸಾಧ್ಯವೇ? ಇದನ್ನು ಸಂಘಸ್ಥಾಪಕ ಡಾಕ್ಟರ್ ಹೆಡಗೇವಾರ್ ಮಾಡಿ ತೋರಿಸಿದ್ದಾರೆ. ನಿತ್ಯಶಾಖೆಯ ಮೂಲಕ ಅಂತಹ ಮಾನವ ಮೂರ್ತಿಗಳನ್ನು ನಿರ್ಮಿಸುವಲ್ಲಿ ಸಂಘವು ಯಶಸ್ವಿಯಾಗಿದೆ. ಈ ಕಾರ್ಯತಂತ್ರದ ಮೂಲಕ ಅತಿ ಸಾಮಾನ್ಯರು ಅಸಾಮಾನ್ಯರಾಗಿದ್ದಾರೆ. ಶಾಖೆಯು ಕರ್ತೃತ್ವ, ನೇತೃತ್ವಗಳನ್ನು ಸಾಮಾನ್ಯನಲ್ಲಿ ತಂದಿದೆ, ತುಂಬಿದೆ. ಗಂಡಕಿ ನದಿಯಲ್ಲಿ ನೀರಿನ ಹರಿವಿನ ಮೂಲಕವೇ ಶಿಲೆಗಳು ಸಾಲಿಗ್ರಾಮಗಳಾಗಿ ಸುಂದರ ರೂಪ ತಾಳುತ್ತವೆ.

ತಾವು ಸಂಘದ ಸ್ವಯಂಸೇವಕರು ಎಂದು ಹೇಳಿಕೊಳ್ಳುವ ಕೆಲವರು ಇಂದು ಸಾರ್ವಜನಿಕ ಜೀವನದಲ್ಲಿ ದಾರಿ ತಪ್ಪಿರುವುದನ್ನು ನೋಡಬಹುದು. ಇದಕ್ಕೆ ಕಾರಣ ಕಾರ್ಯಪದ್ಧತಿಯಲ್ಲ. ಕಾರ್ಯಪದ್ಧತಿಯ ಕಾರಣದಿಂದ ಎಲ್ಲೋ ಇರಬೇಕಾದವರು ಇಲ್ಲಿಯವರೆಗೆ ಬಂದಿದ್ದಾರೆ. ಆದರೆ ತಮಗೆ ದೊರೆತ ಸ್ಥಾನ–ಮಾನ–ಸಮ್ಮಾನಗಳನ್ನು ಜೀರ್ಣಿಸಿಕೊಳ್ಳುವ ಶಕ್ತಿಯನ್ನು ಮತ್ತು ಎಲ್ಲಕ್ಕಿಂತ ಮುಖ್ಯವಾಗಿ ಸ್ವಯಂಸೇವಕನ ಮೂಲ ಗುಣವಾದ ನಿಸ್ವಾರ್ಥತೆಯನ್ನು ಅವರು ಕಳೆದುಕೊಂಡರು. ದಶಕಗಳ ಕಾಲದಿಂದ ಈ ರೀತಿಯ ನಿತ್ಯ ತಪಸ್ಸಿಗೆ ಅವರು ಒಡ್ಡಿಕೊಳ್ಳಲಿಲ್ಲ ಎಂಬುದು ಕಟು ಸತ್ಯ. ಮೇಲಾಗಿ ಎಲ್ಲ ರೀತಿಯ ಸಜ್ಜನಿಕೆಯನ್ನು ತಪಸ್ಸನ್ನು ಒಂದೇ ಹೊಡೆತದಲ್ಲಿ ನಾಶ ಮಾಡುವ ರಾಜಕಾರಣ ಕ್ಷೇತ್ರದಲ್ಲಿ ಅವರು ಕೆಲಸ ಮಾಡುತ್ತಿದ್ದವರು. ನಿಜಕ್ಕೂ ಒಬ್ಬ ಸಾಮಾನ್ಯ ಸ್ವಯಂಸೇವಕನಿಗಿಂತ ಹೆಚ್ಚು ಎಚ್ಚರಿಕೆಯನ್ನು ಅವರು ತೆಗೆದುಕೊಳ್ಳಬೇಕಾಗಿತ್ತು. ಆದರೆ ದುರಂತ, ಸಾಮಾನ್ಯ ಸ್ವಯಂಸೇವಕನಿಗೆ ಸಿಗುವ ಸಂಸ್ಕಾರಗಳಿಂದಲೂ ಅವರು 20–30ಗಿಂತ ಹೆಚ್ಚು ವರ್ಷಗಳ ಕಾಲ ವಂಚಿತರಾಗಿದ್ದರು. ಪೂ॥ ಗುರೂಜಿಯವರು "ಒಬ್ಬ ಸ್ವಯಂಸೇವಕನ ನಡವಳಿಕೆಯ ಬಗ್ಗೆ ನೀವು ನೀಡುವ ಖಾತರಿ ಏನು?" ಎಂಬ ಪ್ರಶ್ನೆಗೆ "ಎಲ್ಲಿಯವರೆಗೆ ನಿತ್ಯ ಶಾಖೆಯ ಸಂಸ್ಕಾರದಿಂದ ಅವನು ವಂಚಿತನಾಗುವುದಿಲ್ಲವೋ ಅಲ್ಲಿಯವರೆಗೆ" ಎಂದು ಉತ್ತರಿಸಿದ್ದು ಇಂದಿಗೂ ಸತ್ಯ. ಹಾಗಾಗಿ ಯಾವುದೇ ಜವಾಬ್ದಾರಿ ಹೊಂದಿದ ಸ್ವಯಂಸೇವಕನಿರಲಿ, ಎಷ್ಟೇ ದೀರ್ಘಕಾಲದ ತಪಸ್ವಿಯಾಗಿರಲಿ, ನಿತ್ಯಶಾಖೆಯ ಅತಿ ಸಾಮಾನ್ಯ ಕಾರ್ಯಕ್ರಮಗಳಲ್ಲಿ ಅತಿ ಸಾಮಾನ್ಯ ವ್ಯಕ್ತಿಯಂತೆ ಆನಂದವಾಗಿ ಪಾಲ್ಗೊಳ್ಳುತ್ತಾನೋ ಆಗ ಮಾತ್ರ, ಹಾಗಾದಾಗ ಮಾತ್ರ ಅವನು ತನ್ನನ್ನು ತಾನು ನಿತ್ಯ ಶುದ್ಧೀಕರಣ ಪ್ರಕ್ರಿಯೆಯಲ್ಲಿ ತೊಡಗಿಕೊಂಡಿದ್ದಾನೆ ಎನ್ನಬಹುದು. ಇಂದು ಪ್ರತಿಯೊಬ್ಬನು ತನ್ನ ಅಹಮಿಕೆಯನ್ನು ನಿಯಂತ್ರಣದಲ್ಲಿಡುವುದು ಅತ್ಯಂತ ಕಠಿಣ ಎನ್ನುವ ಸ್ಥಿತಿ ಇದೆ. ಈ ಸವಾಲು ಡಾಕ್ಟರ್‌ಜಿ ಕಾಲದಲ್ಲಿ ಇಷ್ಟೊಂದು ತೀವ್ರವಾಗಿರಲಿಲ್ಲ. ಬೆಟ್ಟದ ಬುಡದಲ್ಲಿ ಮನುಷ್ಯ ಜಾರುವ ಸಂಭವ ಕಡಿಮೆ. ಎತ್ತರಕ್ಕೆ ಹೋದಷ್ಟೂ, ತುದಿ ತಲುಪಿದಷ್ಟೂ ಹೆಚ್ಚು ಹೆಚ್ಚು ಹುಷಾರಾಗಿರಬೇಕಾಗುತ್ತದೆ. ಇದಕ್ಕೆ ಇಂದು ಸಾಮಾನ್ಯ ಮಟ್ಟದಲ್ಲಿ ಅಲ್ಲ, ತನ್ನತನವನ್ನು ಸ್ವಂತದ ಪರಿಶುದ್ಧತೆಯನ್ನು ಉಳಿಸಿಕೊಳ್ಳಲು ವಿಶೇಷ ತಯಾರಿ ಬೇಕು.

ಇಂದಿನ ಸಮಸ್ಯೆಗಳಿಗೆ ಬೌದ್ಧಿಕ ಸ್ತರದ ಉತ್ತರ ಕೊಡುವುದು ಬಹಳ ಸಣ್ಣ ಭಾಗ ಮತ್ತು ಅದು ಬಹಳ ಸುಲಭದ ಕೆಲಸ. ಆದರೆ ವಾಸ್ತವಿಕ ರೂಪದಲ್ಲಿ, ಪರಿವರ್ತನೆಯ ಮೂಲಕವೇ ಉತ್ತರ ಕೊಡುವುದು ಕಷ್ಟದ ಕೆಲಸ ಮಾತ್ರವಲ್ಲ ಅದೇ ಪ್ರಮುಖ ಭಾಗ. ಪರಿವರ್ತನೆಗೆ ಮನುಷ್ಯನೇ ಆಧಾರ. ಕಾರ್ಯಕರ್ತರೂಪಿ ಮನುಷ್ಯ ಇದನ್ನು ಸಾಧಿಸಬಲ್ಲ. ಎಷ್ಟು ಹೆಚ್ಚು ಸಂಖ್ಯೆಯಲ್ಲಿ ಕಾರ್ಯಕರ್ತರು ನಿರ್ಮಾಣವಾಗುತ್ತಾರೋ ಅಷ್ಟು ವೇಗವಾಗಿ ಬದಲಾವಣೆ ಸಾಧ್ಯ. ಆದರೆ ಇಂತಹ ಅವಶ್ಯಕ ಕಾರ್ಯಕರ್ತರು ರೂಪಗೊಳ್ಳುವುದು ಸಭೆ, ಸಮಾರಂಭ, ವಿಚಾರ ಸಂಕಿರಣಗಳಲ್ಲಿ ಅಲ್ಲ. ಮೌನ ತಪಸ್ಸಿನ ಒಂದು ವಿಶಿಷ್ಟ ವಾತಾವರಣದಲ್ಲಿ. ಆದ್ದರಿಂದ ಇಂದಿನ ಸವಾಲುಗಳ ಕಾಲಮಾನ ವಾಯುಮಾನಗಳಿಗೆ ತಕ್ಕ ರೀತಿಯ ಸಂಸ್ಕಾರಪ್ರದ ಕಾರ್ಯಕ್ರಮಗಳನ್ನು ವಯೋಮಾನಕ್ಕೆ ಅನುಗುಣವಾಗಿ ಕಾರ್ಯಕ್ರಮಗಳನ್ನು ರೂಪಿಸಬೇಕಾಗಿದೆ.

ಪ್ರೌಢರಿಗೆ, ತರುಣರಿಗೆ, ಕಾಲೇಜು ವಿದ್ಯಾರ್ಥಿಗಳಿಗೆ, ಕಿಶೋರರಿಗೆ, ಬಾಲಕರಿಗೆ, ಶಿಶುಗಳಿಗೆ ತಕ್ಕ ರೀತಿಯ ಶಾರೀರಿಕ ಬೌದ್ಧಿಕ ಕಾರ್ಯಕ್ರಮಗಳನ್ನು ರೂಪಿಸುವುದು ಅನಿವಾರ್ಯವಾಗಿದೆ. ತನ್ನಲ್ಲಿನ ದೈವಿಕತೆಯ ವಿಕಾಸದ ಮತ್ತು ತನ್ನೊಳಗೆ ಅಡಗಿರುವ ಅಪರಿಮಿತ ಶಕ್ತಿಯನ್ನು ತಾನೇ ಸ್ವತಃ ಅನುಭವಿಸುವ ಅವಕಾಶವನ್ನು ಒದಗಿಸಕೊಡಬೇಕಾಗಿದೆ. ಆ ಮೂಲಕ ಇಂದು ವ್ಯಕ್ತಿ, ಕುಟುಂಬ, ಗ್ರಾಮ, ಜಾತಿ, ಸುತ್ತಮುತ್ತಲ ಪ್ರದೇಶ ಹೀಗೆ ಎಲ್ಲ ಹಂತಗಳಲ್ಲಿ ಕಾಡುತ್ತಿರುವ ಸಮಸ್ಯೆಗಳಿಗೆ ಒಂದು ಸರಿಯಾದ ಪರಿಹಾರ ರೂಪಿಸಲು ಸಾಧ್ಯ.

ಸಂಘದ ಸ್ವಯಂಸೇವಕ-ಕಾರ್ಯಕರ್ತನ ದೃಷ್ಟಿಯಿಂದ ಧರ್ಮ ಎಂದರೆ ಅದು ಶಾಖಾ ಸ್ವರೂಪದ ನಿಯಮಿತವಾದ ಕಾರ್ಯಕ್ರಮದಲ್ಲಿ ಭಾಗವಹಿಸುವುದು, ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಮಾಡುವುದು.. ಅದು ತಿಂಗಳಿಗೊಮ್ಮೆ, ಎರಡು ವಾರಕ್ಕೊಮ್ಮೆ, ವಾರಕ್ಕೊಮ್ಮೆ, ವಾರಕ್ಕೆ 2-3 ಬಾರಿ ಆಗಬಹುದು ಇಲ್ಲವೇ ನಿತ್ಯ-ಪ್ರತಿನಿತ್ಯ ಆಗಬಹುದು. ಇದರ ಆವೃತ್ತಿ (ಫ್ರೀಕ್ವೆನ್ಸಿ) ಎಷ್ಟು ಹೆಚ್ಚು ಆಗುವುದೋ ಅಷ್ಟು ಒಳ್ಳೆಯದಾಗುತ್ತದೆ. ಆದರೆ ಅಪೇಕ್ಷಿತ ಸ್ಥಾನೀಯ ವ್ಯಕ್ತಿಗಳ ಆಸಕ್ತಿ ಸಮಯ ಸನ್ನಿವೇಶಗಳನ್ನು ಆಧರಿಸಿ ಎಷ್ಟು ದಿನಕ್ಕೊಮ್ಮೆ ಸೇರಬಹುದು ಎಂಬುದನ್ನು ನಿಶ್ಚಯಿಸಬಹುದು. ನಿತ್ಯ ನಿಯಮಿತತೆಗೆ ಒಂದು ಅದ್ಭುತ ಶಕ್ತಿ ಇದ್ದೇ ಇದೆ. ಅದರ ಸದುಪಯೋಗ ಸಮಾಜೋಪಯೋಗ ಆಗಬೇಕು ಅಷ್ಟೆ.

**ರಾಷ್ಟ್ರ ರಕ್ಷಣೆಯ ಹಾದಿಯಲ್ಲಿ....**: ಪ್ರತಿವರ್ಷ ರಾಖಿಯ ಮೂಲಕ ರಕ್ಷಣೆಯ ಸಂಕಲ್ಪ ತೊಟ್ಟ ಸ್ವಯಂಸೇವಕರು ಕಳೆದ 85 ವರ್ಷಗಳಲ್ಲಿ ವಿವಿಧ ರೀತಿಯ ರಕ್ಷಣಾ ಕಾರ್ಯಗಳನ್ನು ನಡೆಸಿ, ದೇಶ ಧರ್ಮ ಸಮಾಜ ಸಂಸ್ಕೃತಿ ಮತ್ತು ದೇಶಬಾಂಧವರನ್ನು ರಕ್ಷಿಸುವಲ್ಲಿ ತಮ್ಮ ಪ್ರಾಣಗಳನ್ನು ಬಲಿ ನೀಡಿದ್ದಾರೆ. ಅಂತಹ ಅಗಣಿತ ಉದಾಹರಣೆಗಳಲ್ಲಿ ಕೆಲವನ್ನು ಉಲ್ಲೇಖಿಸಬಹುದಾದರೆ 1. ದೇಶ ವಿಭಜನೆಯ ಸಮಯದಲ್ಲಿ ಪಾಕ್‌ನಲ್ಲಿದ್ದ ಹಿಂದುಗಳ ರಕ್ಷಣೆ, ಅವರ ಸುರಕ್ಷಿತವಾಗಿ ಭಾರತಕ್ಕೆ ಕಳುಹಿಸಿದ್ದು. ನೂರಾರು ಸಂಖ್ಯೆಯಲ್ಲಿ ಸ್ವಯಂಸೇವಕರ ಬಲಿದಾನ. 2. ಪಾರ್ಲಿಮೆಂಟ್‌ನ ಮೇಲೆ ದಾಳಿ ಮಾಡಿ ಭಾರತದ ಪ್ರಮುಖರನ್ನು ಮುಗಿಸುವ ಯೋಜನೆಯ ಬಹಿರಂಗವಾಗಿದ್ದು ದೆಹಲಿಯ ಸಾಯಂ ಶಾಖೆಯೊಂದರ ಆಟದ ಚೆಂಡು ಶಸ್ತ್ರಾಸ್ತ್ರ ತುಂಬಿದ ಗೋಧಾಮಿಗೆ ನುಗ್ಗಿದಾಗ. (ಭಾರತ ರತ್ನ ಡಾ॥ ಭಗವಾನದಾಸ್‌ರ 'ನೌ ಇಟ್ ಕ್ಯಾನ್ ಬಿ ಟೋಲ್ಡ್' ಗ್ರಂಥದಲ್ಲಿ ಉಲ್ಲೇಖಿತ) 3. 1947ರ ನವೆಂಬರ್‌ನಲ್ಲಿ ಕಾಶ್ಮೀರ ಕಣಿವೆಗೆ ಪಾಕ್ ಸೇನೆ ನುಗ್ಗಿದಾಗ, ಕೆಲವೇ ಗಂಟೆಗಳಲ್ಲಿ ಭಾರತದ ಸೇನೆ ಶ್ರೀನಗರವನ್ನು ವಿಮಾಸದಲ್ಲಿ ತಲುಪಬೇಕು. ವಿಮಾನ ಇಳಿಯಬೇಕಾದ ರನ್‌ವೇ ಹಿಮದಿಂದ ತುಂಬಿತ್ತು. ನಡುರಾತ್ರಿಯ ಕೆಲವು ಗಂಟೆಗಳಲ್ಲಿ ಹಿಮ ತೆಗೆದರು. ಸೇನೆ ಬಂತು. ಶ್ರೀನಗರ ಉಳಿಯಿತು. ಈ ಕಾರ್ಯಾಚರಣೆಯಲ್ಲಿ 'ಹಿಮಕಚ್ಚುವಿಕೆ'ಯಿಂದ ಅನೇಕ ಸ್ವಯಂಸೇವಕರು ಕೈ ಕಾಲು ಕಳೆದುಕೊಂಡರು. 3. ಗೊಂದಲದಲ್ಲಿದ್ದ ಜಮ್ಮು ಕಾಶ್ಮೀರ ಭಾರತಕ್ಕೆ ಸೇರುವಂತೆ ರಾಜಾ ಹರಿಸಿಂಗ್ ಅವರ ಮನವೊಲಿಸಿದ್ದು ಶ್ರೀ ಗುರೂಜಿಯವರು. 4. 1962ರ ಚೀನಾ ದಾಳಿ ಮತ್ತು 1965ರ ಪಾಕ್ ಯುದ್ಧದ  ಸಮಯದಲ್ಲಿ ಸ್ವಯಂಸೇವಕರು ಗಡಿ ಪ್ರದೇಶದಲ್ಲಿ ಸೈನಿಕರಿಗೆ ಆಹಾರ ಮದ್ದು ಗುಂಡು ಪೂರೈಸಿದ್ದು, ಸೈನಿಕರಿಗೆ ರಕ್ತ ನೀಡಿದ್ದು, ದೆಹಲಿಯಲ್ಲಿ ವಾಹನ ಸಾರಿಗೆ ನಿಯಂತ್ರಿಸಿದ್ದು. ಹತ್ತಾರು ಸ್ವಯಂಸೇವಕ ಶತ್ರುಗುಂಡಿಗೆ ಬಲಿಯಾದರು. 5. ತುರ್ತು ಪರಿಸ್ಥಿತಿ ಘೋಷಣೆಯಾದಾಗ ಅಸಹನೀಯ ಚಿತ್ರಹಿಂಸೆಗಳನ್ನು ಅನುಭವಿಸಿ, ಭೂಗತ ಚಳವಳಿಯ ಮೂಲಕ ಸರ್ವಾಧಿಕಾರಿಯಾಗಿ ಮೆರೆಯುತ್ತಿದ್ದ ಇಂದಿರಾಗಾಂಧಿಯ ಗದ್ದುಗೆಯನ್ನು ಕಿತ್ತೊಗೆದದ್ದು. 5. ಕನ್ಯಾಕುಮಾರಿಯ ಶ್ರೀಪಾದ ಶಿಲೆಯ ಮೇಲೆ ನೆಟ್ಟ ಕ್ರಾಸ್ ತೆಗೆದು, 1963ರಲ್ಲಿ ಸ್ವಾಮಿ ವಿವೇಕಾನಂದ ಭವ್ಯ ಶಿಲಾ ಸ್ಮಾರಕವನ್ನು ನಿರ್ಮಿಸಿದ್ದು. 6. 1969ರ ಉಡುಪಿಯಲ್ಲಿ ವಿ.ಹಿ.ಪ. ದ್ವಿತೀಯ ಪ್ರಾಂತೀಯ ಸಮ್ಮೇಳನದಲ್ಲಿ ಅಸ್ಪೃಶ್ಯತೆ ಶಾಸ್ತ್ರಸಮ್ಮತವಲ್ಲ, "ಹಿಂದವ ಸೋದರಾಃ ಸರ್ವೆ, ನ ಹಿಂದುಃ ಪತಿತೋ ಭವೇತ್" ಎಂದು ಸಂತರಿಂದ ಘೋಷಿತವಾದದ್ದು. 6. 1982ರ ಮೀನಾಕ್ಷಿಪುರಂ ಮತಾಂತರದ ಹಿನ್ನೆಲೆಯಲ್ಲಿ ಇಡೀ ದೇಶದಲ್ಲಿ ಮತಾಂತರದ ವಿರುದ್ಧ ಜನಜಾಗೃತಿ. 7. 1986ರಿಂದ ಆರಂಭವಾದ ಅಯೋಧ್ಯಾ ಶ್ರೀರಾಮ ಮಂದಿರ ಹೋರಾಟವು 1982ರ ಡಿಸೆಂಬರ್‌ನಲ್ಲಿ ಕಳಂಕಿತ ಗುಮ್ಮಟ ಉರುಳಿ, ತಾತ್ಕಾಲಿಕ ರಾಮಮಂದಿರ ನಿರ್ಮಾಣದವರೆಗೆ ದೇಶಾದ್ಯಂತ ನಡೆದ ಮಹಾನ್ ಅಭಿಯಾನ. 8. ಕ್ರೈಸ್ತ ಮತಾಂತರಿಗಳಿಂದ ತಿರುಪತಿ ತಿರುಮಲ ಉಳಿಸಿದ ಯಶಸ್ವೀ ಹೋರಾಟ, ರಾಮೇಶ್ವರದ ರಾಮಸೇತು ಉಳಿಸಿ ಹೋರಾಟ, ಅಮರನಾಥಕ್ಕೆ ನೀಡಿದ ಭೂಮಿಯ ವಾಪಾಸ್ಸು ಪಡೆಯುವ ಹೋರಾಟ, ಅಸ್ಸಾಂ ಉಳಿಸಿ ಹೋರಾಟ ಹೀಗೆ ಅನೇಕ ಜನಜಾಗೃತಿ ಅಭಿಯಾನಗಳು. ಧಾರ್ಮಿಕ, ವಿದ್ಯಾರ್ಥಿ, ಶಿಕ್ಷಣ, ಕಾರ್ಮಿಕ, ಕೃಷಿಕ, ವನವಾಸಿ, ಪರಿಸರ, ಸಂಸ್ಕಾರ, ಸಂಸ್ಕೃತ, ಮುಂತಾದ ಅನೇಕ ರಂಗಗಳಲ್ಲಿ ನೆಲ-ಜಲ-ಗೋ-ಗ್ರಾಮ-ನಾಡು-ನುಡಿ ರಕ್ಷಣೆಗಳಲ್ಲಿ ಸಂಘದ ಸ್ವಯಂಸೇವಕರು ದುಡಿದಿದ್ದಾರೆ, ಮಡಿದಿದ್ದಾರೆ. ಇದಕ್ಕೆ ಪ್ರೇರಣೆ ನೀಡಿದ್ದು ಇದೇ ರಕ್ಷೆಯ ಸಂಕಲ್ಪ. ರಕ್ಷೆ ಕಟ್ಟಿಕೊಂಡ ನಿರಂತರ ಸಂಸ್ಕಾರ ಅವರನ್ನು ಎಂತಹ ಬಲಿದಾನಕ್ಕೂ ಸಿದ್ಧಮಾಡಿತು.

ಸಮಾಜ ಕಾರ್ಯಕ್ಕೆ, ರಾಷ್ಟ್ರ ಕಾರ್ಯಕ್ಕೆ ತಕ್ಕ ಪೂರಕ ಮತ್ತು ಪ್ರೋತ್ಸಾಹಕ ವಾತಾವರಣವನ್ನು ಮನೆಯಲ್ಲಿರುವ ಪ್ರತಿಯೊಬ್ಬರ  ತಂದೆ ತಾಯಿ ಮನೆಯವರು ಮೂಡಿಸಬೇಕು. ಇದು ಎಲ್ಲರ ಕಾರ್ಯ. ನಿಧಾನವಾಗಿ ಅವರೂ ಸಹ ಈ ಸಮಾಜ ಪರಿವರ್ತನೆಯ ದಿಕ್ಕಿನಲ್ಲಿ ಭಾಗಿಗಳಾಗಬೇಕು. ಇಂದಿನ ಪರಿಸ್ಥಿತಿಯಲ್ಲಿ ದೇಶಭಕ್ತಿ ಮತ್ತು ದೈವಭಕ್ತಿ ಒಂದಾಗಬೇಕು. ದೇಶವಿದ್ದರೆ ಧರ್ಮ-ದೈವ. (ಕಾಶ್ಮೀರದ ಕಣಿವೆಯಲ್ಲಿ ಇಂದು ದೈವ-ಧರ್ಮ ಯಾವುದೂ ಇಲ್ಲ) ಹೀಗೆ ದೇಶ-ಧರ್ಮಗಳನ್ನು ಉಳಿಸಿ ಬೆಳೆಸುವ ಪುಣ್ಯಕಾರ್ಯದಲ್ಲಿ ನಮ್ಮ ಶರೀರ ಮನಸ್ಸು ಬುದ್ಧಿಗಳ ಸಂಪೂರ್ಣ ಬಳಕೆ ಆಗಲಿ ಎಂಬುದಕ್ಕೆ ನಾವು ಕಟ್ಟಿಕೊಳ್ಳುವ ಈ ರಕ್ಷೆ ಪ್ರೇರಣೆ ನೀಡಲಿ. ರಕ್ಷೆ ಎಲ್ಲರಿಗೆ ಶುಭ ತರಲಿ.